# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 186 (1447) |
| ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣ ಕಮಕನೂರ (ನಾಮನಿರ್ದೇಶನ ಹೊಂದಿದವವರು) |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿಗಳು |
| ಉತ್ತರಿಸುವ ದಿನಾಂಕ | : | 19-03-2020 |

<table>
<tr><th>#</th><th>ಪ್ರಶ್ನೆ</th><th>ಉತ್ತರ</th><th>Answer</th></tr>
<tr><td>ಅ</td><td>ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿರುವ ದಾಲ್‌ಮಿಲ್‌ಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ದಾಲ್ ಮಿಲ್‌ಗಳ ಸಂಖ್ಯೆಯ ತಾಲ್ಲೂಕುವಾರು ವಿವರಗಳು ಈ ಕೆಳಗಿನಂತಿದೆ:
<table>
<tr><th>ಜಿಲ್ಲೆ</th><th>ತಾಲ್ಲೂಕು</th><th>ಘಟಕಗಳ ಸಂಖ್ಯೆ</th></tr>
<tr><td>ಕಲಬುರಗಿ</td><td>ಕಲಬುರಗಿ</td><td>276</td></tr>
<tr><td>ಕಲಬುರಗಿ</td><td>ಚಿತ್ತಾಪುರ</td><td>14</td></tr>
<tr><td>ಕಲಬುರಗಿ</td><td>ಜೇವರ್ಗಿ</td><td>2</td></tr>
<tr><td>ಕಲಬುರಗಿ</td><td>ಸೇಡಂ</td><td>5</td></tr>
<tr><td>ಕಲಬುರಗಿ</td><td>ಆಳಂದ</td><td>1</td></tr>
<tr><td>ಯಾದಗಿರಿ</td><td>ಯಾದಗಿರಿ</td><td>9</td></tr>
<tr><td>ಯಾದಗಿರಿ</td><td>ಶಹಾಪುರ</td><td>-</td></tr>
<tr><td>ಯಾದಗಿರಿ</td><td>ಶೋರಾಪುರ</td><td>-</td></tr>
<tr><td>ಒಟ್ಟು</td><td></td><td>307</td></tr>
</table></td><td>The taluk wise number of Dal Mills present in Kalaburgi and Yadgir district is as shown below:
<table>
<tr><th>District</th><th>Taluk</th><th>No. of units</th></tr>
<tr><td>Kalaburgi</td><td>Kalaburgi</td><td>276</td></tr>
<tr><td>Kalaburgi</td><td>Chittapura</td><td>14</td></tr>
<tr><td>Kalaburgi</td><td>Jevargi</td><td>2</td></tr>
<tr><td>Kalaburgi</td><td>Sedam</td><td>5</td></tr>
<tr><td>Kalaburgi</td><td>Alanda</td><td>2</td></tr>
<tr><td>Yadagiri</td><td>Yadagiri</td><td>9</td></tr>
<tr><td>Yadagiri</td><td>Shahapur</td><td>-</td></tr>
<tr><td>Yadagiri</td><td>Shorapur</td><td>-</td></tr>
<tr><td>Total</td><td></td><td>307</td></tr>
</table></td></tr>
<tr><td>ಆ</td><td>ದಾಲ್‌ಮಿಲ್‌ಗಳು ಕೆಲವು ಸಮಸ್ಯೆಗಳಿಂದ ಮುಚ್ಚುವ ಸ್ಥಿತಿಯಲ್ಲಿರುವುದು</td><td>ಒಟ್ಟು 307 ದಾಲ್‌ಮಿಲ್‌ಗಳ ಪೈಕಿ ಪ್ರಸ್ತುತ 269 ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, 38 ಘಟಕಗಳು ಮುಚ್ಚಿರುತ್ತವೆ.</td><td>About 269 dal units are functioning and 38 units have closed down out of total 307.</td></tr>
</table>

| # | ಪ್ರಶ್ನೆ | ಉತ್ತರ | Answer |
|---|---|---|---|
| | ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅದಕ್ಕೆ ಕಾರಣಗಳನ್ನು ನೀಡುವುದು; | ಕಲಬುರಗಿ ದಾಲ್‌ಮಿಲ್ಲರ್ಸ್ ಅಸೋಷಿಯೇಷನ್ ರವರು ಕೆಳಕಂಡ ಕಾರಣಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ:<br><br>1. **ಆಮದು ನೀತಿ:**<br>ಕೇಂದ್ರ ಸರ್ಕಾರವು ಬೆಲೆಯೇರಿಕೆಯನ್ನು ನಿಯಂತ್ರಣ ಮಾಡುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಬೇಡಿಕೆ ಪೂರೈಸಲು ಹೊರದೇಶದಿಂದ ಬೇಳೆ ಕಾಳುಗಳ ಆಮದು ಮಾಡಿಕೊಳ್ಳಲು 2015-16ರಲ್ಲಿ ಅವಕಾಶ ಕಲ್ಪಿಸಿತು. ಇದರಿಂದ ತೊಗರಿ ಬೇಳೆ ಕಾಳುಗಳ ಬೆಲೆಯಲ್ಲಿ ಸಾಕಷ್ಟು ಕುಸಿತ ಕಂಡು ಬಂದಿದೆ. ಪ್ರತಿ ಕ್ವಿಂಟಾಲ್‌ಗೆ ರೂ.12,000/- ರಿಂದ ರೂ.15,000/- ವರೆಗೆ ಇದ್ದ ಬೇಳೆ ಕಾಳುಗಳ ಬೆಲೆಯು ಆಮದು ನೀತಿಯಿಂದಾಗಿ ರೂ.4,750/- ರಿಂದ ರೂ.5,000/- ವರೆಗೆ ಇಳಿಕೆಯಾಗಿರುತ್ತದೆ.<br><br>2. **ಎ.ಪಿ.ಎಂ.ಸಿ ಸೆಸ್ ಸಂಗ್ರಹಣೆ:**<br>ರಾಜ್ಯದಲ್ಲಿ ಎಪಿಎಂಸಿ ಸೆಸ್ ದರವು ಶೇ. 1.5ರಷ್ಟಿದ್ದು, ಮಹಾರಾಷ್ಟ್ರದಲ್ಲಿ ಅದು ಶೇ. 0.80 ಮತ್ತು ಆಂಧ್ರಪ್ರದೇಶದಲ್ಲಿ ಶೇ. 1.0 ಇದೆ. ಇದರಿಂದಾಗಿ ತೊಗರಿ ಕಾಳು ಪಕ್ಕದ ರಾಜ್ಯಗಳಿಗೆ ಸರಬರಾಜಾಗುತ್ತಿದೆ.<br><br>3. **ಬ್ಯಾಂಕುಗಳು ಕ್ಯಾಷ್ ಕ್ರೆಡಿಟ್ (ಸಿ.ಸಿ.) ಸಾಲದ ಮೇಲೆ ವಿಧಿಸುತ್ತಿರುವ ಬಡ್ಡಿ ದರ:**<br>ರಾಷ್ಟ್ರೀಕೃತ ಬ್ಯಾಂಕುಗಳು ದಾಲ್ ಮಿಲ್‌ಗಳ ಮಾಲೀಕರು ಬೇಳೆ ಖರೀದಿಸಲು ನೀಡುವ ಸಿ.ಸಿ. | Kalaburagi Dal Millers Association has submitted following reasons for the same:<br><br>1. **Import policy:**<br>The Government of India, in order to control the spiraling price and meet domestic demand allowed import of dal from other countries in 2015-16. This has resulted in reduction in price of dal. The dal rate which was Rs.12,000 to Rs.15,000 per quintal came down to Rs.4,750/- to Rs.5000 per quintal after import policy.<br><br>2. **A.P.M.C cess collection:**<br>APMC cess is levied at 1.5% in Karnataka whereas the same is 0.80% in Maharashtra and 1.0% in Andhra Pradesh. Therefore the dal is being diverted to neighbouring states.<br><br>3. **Rate of Interest charged on CC loans by banks :**<br>The Nationalized banks are charging 11% - 12% rate of interest on CC loans availed by Dal mill units for procurement of dal raw material. |

| # | ಪ್ರಶ್ನೆ | ಉತ್ತರ | Answer |
|---|---|---|---|
| | | ಸಾಲದ ಮೇಲೆ ಶೇ.11-ಶೇ.12 ದಂತೆ ಬಡ್ಡಿ ವಿಧಿಸುತ್ತಿರುವುದರಿಂದ ಹೆಚ್ಚಿನ ಘಟಕಗಳು ಬಡ್ಡಿ ಪಾವತಿಸಿ ನಷ್ಟಕ್ಕೆ ಜಾರಿರುತ್ತವೆ. | This has resulted in the loss to dal mills |
| ಇ | ಪುನಃಶ್ಚೇತನ ಹಿನ್ನಲೆಯಲ್ಲಿ ಜಿಲ್ಲಾ ಆಡಳಿತ ಮಾಡಿರುವ ಶಿಫಾರಸ್ಸುಗಳೇನು; | ಜಿಲ್ಲಾಧಿಕಾರಿಗಳು, ಕಲಬುರಗಿ ಇವರು ಜಿಲ್ಲೆಯಲ್ಲಿ ನಷ್ಟಕ್ಕೊಳಗಾಗಿರುವ ದಾಲ್‌ಮಿಲ್‌ಗಳ ಪುನಃಶ್ಚೇತನಕ್ಕೆ ತಮ್ಮ ಪತ್ರ ಸಂಖ್ಯೆ: ಜಿಕೈಕೇ/ದಾಲ್‌ಮಿಲ್/ಸಂಕಷ್ಟ/2017-18 ದಿ:4/1/2018 ಮೂಲಕ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ.<br><br>1) ಹೈದರಾಬಾದ್ ಕರ್ನಾಟಕದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ದಾಲ್‌ಮಿಲ್ ಘಟಕಗಳಿಗೆ ಮುಂದಿನ 5 ವರ್ಷಗಳವರೆಗೆ ಎ.ಪಿ.ಎಂ.ಸಿ ಸೆಸ್ ಸಂಗ್ರಹಣೆಯಿಂದ ವಿನಾಯಿತಿ<br><br>2) ಘಟಕಗಳು ಉತ್ಪಾದನೆಯನ್ನು ಪುನರ್ ಪ್ರಾರಂಭಿಸಿದಲ್ಲಿ ಮುಂದಿನ 3 ವರ್ಷಗಳ ಅವಧಿಗೆ ಉತ್ಪಾದಿಸಿದ ಪ್ರತೀ ಕ್ವಿಂಟಾಲ್‌ಗೆ ರೂ.200.00 ರಂತೆ ಪ್ರೋತ್ಸಾಹಧನ ನೀಡುವುದು.<br><br>3) ವಿದ್ಯುಚ್ಛಕ್ತಿ ಬಿಲ್‌ನಲ್ಲಿ 5 ವರ್ಷಗಳ ಅವಧಿಗೆ ಪ್ರತೀ ಯೂನಿಟ್‌ಗೆ ರೂ.2.00 ರಂತೆ ರಿಯಾಯಿತಿ ನೀಡುವುದು.<br><br>4) ದಾಲ್‌ಮಿಲ್‌ಗಳಿಗೆ ಬ್ಯಾಂಕಿನಿಂದ ನೀಡುತ್ತಿರುವ ಸಾಲವನ್ನು "ಆದ್ಯತಾ ವಲಯ" ಎಂದು ಪರಿಗಣಿಸಿ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವಂತೆ ಪರಿಗಣಿಸುವುದು. | Deputy Commissioner, Kalburgi district has recommended the following measures for revival of sick dal mills vide letter No. DIC/DAL MILL/LOSS/2017-18 dated: 4/1/2018.<br><br>1. 100% APMC cess exemption be offered for next 5 years to all the Dal Mills of Hyderbad-Karnataka region.<br><br>2. To provide Rs.200/- incentive to every quintal of production for a further period of 3 years if the unit is restarted.<br><br>3. Providing electricity concession at the rate of Rs.2.00 per unit for a period of five years.<br><br>4. Loans given by Bank to Dal Mills are to be considered as "Priority Sector" and to sanction loans at reduced rate of |

| # | ಪ್ರಶ್ನೆ | ಉತ್ತರ | Answer |
|---|---|---|---|
| | | | interest. |
| | | 5) ನೆರೆರಾಜ್ಯಗಳಲ್ಲಿರುವಂತೆ ಎಲ್.ಟಿ ಗರಿಷ್ಟ ಮಿತಿಯನ್ನು 65 ಹೆಚ್.ಪಿ ಬದಲಾಗಿ 99 ಹೆಚ್.ಪಿ ಮಾಡುವುದು. | 5. To raise the LT Maximum limit from 65 HP to 99 HP as prevailing in the neihbouring State |
| | | 6) ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ 3 ತಿಂಗಳಲ್ಲಿ ಪಾವತಿ ಆಗದಿದ್ದಲ್ಲಿ ಅಂತಹ ಖಾತೆಗಳನ್ನು ಎನ್.ಪಿ.ಎ ಖಾತೆಗಳೆಂದು ಪರಿಗಣಿಸಲಾಗುತ್ತಿದೆ ಮತ್ತು ಅವುಗಳಿಗೆ SARFAESI ಆಕ್ಟ್ ಮೂಲಕ ಹರಾಜು ಹಾಕಲಾಗುತ್ತಿದೆ. ಆದುದರಿಂದ ಎನ್.ಪಿ.ಎ ಮಿತಿಯನ್ನು 3 ತಿಂಗಳ ಬದಲಾಗಿ 9 ತಿಂಗಳ ವರೆಗೆ ವಿಸ್ತರಿಸುವುದು. | 6. The Nationaliezed Banks are considering the accounts which are defaulted more than 3 months as NPA and Auction is being carried out under SARFAESI Act. Therefore, to extend the NPA limit from 3 months to 9 months. |
| | | 7) ದಾಲ್‌ಮಿಲ್ ಘಟಕಗಳು ಬ್ಯಾಂಕಿನಿಂದ ಪಡೆದ ಸಾಲ ವಸೂಲಾತಿ ಒಂದು ವರ್ಷದ ಮಟ್ಟಿಗೆ ರಿಕವರಿ ಹಾಲಿಡೇ ಘೋಷಿಸಿ, ಈ ಅವಧಿಯಲ್ಲಿ ಬ್ಯಾಂಕು ವಿಧಿಸುವ ಬಡ್ಡಿಯ ಮೊತ್ತದಲ್ಲಿ ಶೇ.50 ರಷ್ಟು ಸರ್ಕಾರ ಭರಿಸಿದಲ್ಲಿ ಘಟಕಗಳಿಗೆ ಪುನಃಶ್ಚೇತನ ಗೊಳಿಸಲು ಅನುಕೂಲವಾಗುತ್ತದೆ. | 7. To declare Recovery holiday for a period of One year to the Dal mill units which have obtained loan from Bank. It helps for revival of units, if 50% of the interest charged by the bank is borne by the GOK during this period. |
| | | 8) ನಫೆಡ್ ಸಂಸ್ಥೆಯು ಟೆಂಡರ್ ಮೂಲಕ ವಿಲೇವಾರಿ ಮಾಡುವ ದಾಸ್ತಾನು ಖರೀದಿಸಲು ಕನಿಷ್ಟ 2000 ಕ್ವಿಂಟಾಲ್ ಖರೀದಿಸುವ ಷರತ್ತು ವಿಧಿಸಿದ್ದು, ಇದನ್ನು 500 ಕ್ವಿಂಟಾಲ್‌ವರೆಗೆ ಖರೀದಿಸಲು ಅವಕಾಶ ಕಲ್ಪಿಸುವುದು. | 8. NAFED has made a condition to purchase minimum 2000 quintal for the disposal made by Tender. The units have requested allow to purchase 500 quintal. |

| # | ಪ್ರಶ್ನೆ | ಉತ್ತರ | Answer |
|---|---|---|---|
| ಈ | ದಾಲ್‌ಮಿಲ್‌ಗಳನ್ನು ಪುನಃಶ್ಚೇತನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸರ್ಕಾರವು ದಾಲ್‌ಮಿಲ್‌ಗಳ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ 10 ಪರಿಹಾರ/ ರಿಯಾಯಿತಿಗಳ ಕುರಿತು ಪರಿಶೀಲಿಸಿರುತ್ತದೆ:<br><br>1. ಚೇತರಿಕೆ ರಜೆ (ರಿಕವರಿ ಹಾಲಿಡೆ)<br>2. ದಾಲ್‌ಮಿಲ್‌ಗಳನ್ನು ಆದ್ಯತಾ ವಲಯ ಎಂದು ಪರಿಗಣಿಸುವ ಬಗ್ಗೆ<br>3. ಎನ್.ಪಿ.ಎ ಯನ್ನು ಮರು ವ್ಯಾಖ್ಯಾನಿಸುವುದು<br>4. ಒ.ಟಿ.ಎಸ್ (ಒಂದು ಸಲ ಮರು ಪಾವತಿ)<br>5. ಪ್ರೋತ್ಸಾಹ ಧನ<br>6. ಎ.ಪಿ.ಎಂ.ಸಿ ಸೆಸ್ ವಿನಾಯಿತಿ<br>7. ವಿದ್ಯುತ್ ಬಿಲ್ ರಿಯಾಯಿತಿ<br>8. ವಿದ್ಯುತ್ ಎಲ್.ಟಿ ಮಿತಿಯನ್ನು ಹೆಚ್ಚಿಸುವ ಬಗ್ಗೆ<br>9. ಕನಿಷ್ಟ ಖರೀದಿ ಮಿತಿಯನ್ನು ಸಡಿಲಿಸುವುದು<br>10. ಬೇಳೆ ಆಮದಿಗೆ ನಿರ್ಬಂಧ ವಿಧಿಸುವುದು.<br><br>ಈ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಬ್ಯಾಂಕು/ಇಲಾಖೆಗಳನ್ನು ಕೋರಲಾಗಿದೆ.<br><br>1. ಬ್ಯಾಂಕ್‌ಗಳಿಗೆ ಸಂಬಂಧಿಸಿದ್ದು –4 ವಿಷಯಗಳು<br>2. ಕೃಷಿ ಮಾರಾಟ ಇಲಾಖೆ –1 ವಿಷಯ<br>3. ಜೆಸ್ಕಾಂ/ ಕೆ.ಆರ್.ಇ.ಸಿ –1 ವಿಷಯ<br>4. ನಫೆಡ್ –1 ವಿಷಯ<br>5. ಸರ್ಕಾರದ ಮಟ್ಟದಲ್ಲಿ –3 ವಿಷಯಗಳು | Following are the 10 important concessions/ reliefs related to dal industries examined by the Government.<br><br>1. Recovery holiday<br>2. Priority sector loan<br>3. Redefining NPA<br>4. One time settlement scheme<br>5. Incentive<br>6. APMC cess exception<br>7. Concession on electricity bill<br>8. Redefining LT power connection<br>9. Minimizing the quantity of buying<br>10. Imposing ban on import of dal<br><br>The issues have been forwarded to departments concerned for necessary action.<br><br>1. Bank related -4 issues<br>2. Agriculture Marketing Dept.-1 issue<br>3. GESCOM/KERC related -1 issue<br>4. NAFED related -1 issue<br>5. Government level -3 issues |

| # | ಪ್ರಶ್ನೆ | ಉತ್ತರ | Answer |
|---|---|---|---|
| | | ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿ ಸಭೆಯಲ್ಲಿ 4 ವಿಷಯಗಳ / ರಿಯಾಯಿತಿಗಳ ಬಗ್ಗೆ ಪರಿಹಾರ/ ರಿಯಾಯಿತಿಗಳನ್ನು ನೀಡುವ ಕುರಿತು ಚರ್ಚಿಸಿದ ತರುವಾಯ ದಾಲ್ ಮಿಲ್‌ಗಳ ಘಟಕಗಳ ಮಾಹಿತಿಯನ್ನು ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಗೆ ಸಲ್ಲಿಸಲಾಗಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎನ್.ಪಿ.ಎ ಆಗಿರುವ ದಾಲ್ ಮಿಲ್ ಗಳ ಪೈಕಿ ಅರ್ಹವಿರುವ 6 ಘಟಕಗಳಿಗೆ ಒಟಿಎಸ್ ಸೌಲಭ್ಯ ಒದಗಿಸಿರುತ್ತದೆ.<br><br>ಕಚ್ಚಾ ಬೇಳೆ ಕಾಳುಗಳ ಖರೀದಿ ಮಿತಿಯನ್ನು ಪ್ರಸ್ತುತ ಕನಿಷ್ಠ 1000 ಕ್ವಿಂಟಾಲ್‌ಗಳಿಗೆ ನಿಗಧಿಪಡಿಸಿರುವುದಾಗಿ ನಫೆಡ್ ಸಂಸ್ಥೆಯು ತಿಳಿಸಿರುತ್ತದೆ.<br><br>ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಇರುವ ಇತರೆ ಸಮಸ್ಯೆಗಳು ಸಂಬಂಧಿಸಿದ ಇಲಾಖೆಗಳ ಪರಿಶೀಲನೆಯಲ್ಲಿರುತ್ತದೆ.<br><br>ರೋಗಗ್ರಸ್ತ ದಾಲ್‌ಮಿಲ್‌ಗಳು ರೋಗಗ್ರಸ್ತ ಕೈಗಾರಿಕೆಗಳ ಪುನಃಶ್ಚೇತನ ನೀತಿಯಡಿಯಲ್ಲಿ ಅರ್ಜಿ ಸಲ್ಲಿಸಿದಲ್ಲಿ ಅವುಗಳಿಗೆ ನೀತಿಯ ಪ್ರಕಾರ ಪರಿಹಾರವನ್ನು ನೀಡಲಾಗುವುದು. | The 4 issues / concessions were discussed in State Level Bankers Committee subsequently, the bank account details of Dal mills were submitted to the Convener, State Level Bankers Committee. State Bank of India has provided OTS facility to 6 eligible units out of total units which were categorized as NPA.<br><br>NAFED has informed that it has fixed a 1000 quintal as the minimum quantity for purchase of raw dal.<br><br>The issues related to different departments are being examined by the respective departments.<br><br>If the sick dal mills submit proposals for rehabilitation, the same would be considered under revival of sick units scheme. |

ಸಿಐ 22 ಸಪ್ರಕೈ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

## ಕರ್ನಾಟಕ ವಿಧಾನಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1447 ಕ್ಕೆ ಪೂರಕ ಟಿಪ್ಪಣಿ

### ಕಲ್ಬುರ್ಗಿ ದಾಲ್ ಮಿಲ್ ಘಟಕಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು

ದಾಲ್ ಮಿಲ್ಲರ್ಸ್ ಅಸೋಸಿಯೇಶನ್ (ರಿ), ಕಲಬುರಗಿ ರವರು ಕಲ್ಬುರ್ಗಿ ದಾಲ್ ಮಿಲ್ ಘಟಕಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಈ ಕೆಳಗಿನಂತೆ ವಿವರಣೆ ನೀಡಿರುತ್ತಾರೆ:

**ಕಲುಬುರಗಿ ಜಿಲ್ಲೆಯ ದಾಲ್ ಮಿಲ್‌ಗಳ ವಸ್ತುಸ್ಥಿತಿ:**

ಕಲಬುರುಗಿ ಜಿಲ್ಲೆಯು "ತೊಗರಿ ಕಣಜ" ವೆಂದು ಪ್ರಸಿದ್ಧಿ ಪಡೆದ ಜಿಲ್ಲೆಯಾಗಿದ್ದು ಜಿಲ್ಲೆಯಲ್ಲಿ ಸುಮಾರು 3.23 ಲಕ್ಷ ಹೆಕ್ಟೇರ್ ಕ್ಷೇತ್ರದಲ್ಲಿ ತೊಗರಿ ಬೆಳೆಯನ್ನು ಬೆಳೆಯಲಾಗುತ್ತದೆ. ಜಿಲ್ಲೆಯಿಂದ ಬೆಂಗಳೂರು, ಹೈದರಾಬಾದ್ ಹಾಗೂ ಚೆನ್ನೈ ನಗರಗಳಿಗೆ ಬೇಳೆಯು ಮಾರಾಟಕ್ಕೆ ಹಚ್ಚಿನ ಪ್ರಮಾಣದಲ್ಲಿ ಸರಬರಾಜು ಆಗುತ್ತದೆ. ಜಿಲ್ಲೆಯಲ್ಲಿ 307 ತೊಗರಿ ಬೇಳೆ ಸಂಸ್ಕರಣ ಘಟಕಗಳಿರುತ್ತವೆ. ಈ ಪೈಕಿ 269 ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, 38 ಘಟಕಗಳು ಮುಚ್ಚಿರುತ್ತವೆ.

**ಈ ದಾಲ್‌ಮಿಲ್‌ಗಳು ಈಗ ಆರ್ಥಿಕ ಸಂಕಷ್ಟದಲ್ಲಿದ್ದು, ರೋಗಗ್ರಸ್ತವಾಗಿದ್ದು ಈ ಸ್ಥಿತಿಗೆ ಹಲವಾರು ಕಾರಣಗಳಿದ್ದು ಪ್ರಮುಖ ಕಾರಣಗಳು ಈ ಕೆಳಗಿನಂತಿವೆ**

1. **ಆಮದು ನೀತಿ:**
   ಕೇಂದ್ರ ಸರ್ಕಾರವು ಬೆಲೆಯೇರಿಕೆಯನ್ನು ನಿಯಂತ್ರಣ ಮಾಡುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಬೇಡಿಕೆ ಪೂರೈಸಲು ಹೊರದೇಶದಿಂದ ಬೇಳೆ ಕಾಳುಗಳ ಆಮದು ಮಾಡಿಕೊಳ್ಳಲು 2015-16ರಲ್ಲಿ ಅವಕಾಶ ಕಲ್ಪಿಸಿತು. ಇದರಿಂದ ತೊಗರಿ ಬೇಳೆ ಕಾಳುಗಳ ಬೆಲೆಯಲ್ಲಿ ಸಾಕಷ್ಟು ಕುಸಿತ ಕಂಡು ಬಂದಿದೆ. ಪ್ರತಿ ಕ್ವಿಂಟಾಲ್‌ಗೆ ರೂ.12,000/- ರಿಂದ ರೂ.15,000/- ವರೆಗೆ ಇದ್ದ ಬೇಳೆ ಕಾಳುಗಳ ಬೆಲೆಯು ಆಮದು ನೀತಿಯಿಂದಾಗಿ ರೂ.4,750/- ರಿಂದ ರೂ.5,000/- ವರೆಗೆ ಇಳಿಕೆಯಾಗಿರುತ್ತದೆ.
2. **ಎ.ಪಿ.ಎಂ.ಸಿ ಸೆಸ್ ಸಂಗ್ರಹಣೆ:**
   ರಾಜ್ಯದಲ್ಲಿ ಎಪಿಎಂಸಿ ಸೆಸ್ ದರವು ಶೇ. 1.5ರಷ್ಟಿದ್ದು, ಮಹಾರಾಷ್ಟ್ರದಲ್ಲಿ ಅದು ಶೇ. 0.80 ಮತ್ತು ಆಂಧ್ರಪ್ರದೇಶದಲ್ಲಿ ಶೇ. 1.0 ಇದೆ. ಇದರಿಂದಾಗಿ ತೊಗರಿ ಕಾಳು ಪಕ್ಕದ ರಾಜ್ಯಗಳಿಗೆ ಸರಬರಾಜಾಗುತ್ತಿದೆ.

3. **ಬ್ಯಾಂಕುಗಳು ಕ್ಯಾಷ್ ಕ್ರೆಡಿಟ್ (ಸಿ.ಸಿ.) ಸಾಲದ ಮೇಲೆ ವಿಧಿಸುತ್ತಿರುವ ಬಡ್ಡಿ ದರ:**
   ರಾಷ್ಟ್ರೀಕೃತ ಬ್ಯಾಂಕುಗಳು ದಾಲ್ ಮಿಲ್‌ಗಳ ಮಾಲೀಕರು ಬೇಳೆ ಖರೀದಿಸಲು ನೀಡುವ ಸಿ.ಸಿ. ಸಾಲದ ಮೇಲೆ ಶೇ.11-ಶೇ.12 ದಂತೆ ಬಡ್ಡಿ ವಿಧಿಸುತ್ತಿರುವುದರಿಂದ ಹೆಚ್ಚಿನ ಘಟಕಗಳು ಬಡ್ಡಿ ಪಾವತಿಸಿ ನಷ್ಟಕ್ಕೆ ಜಾರಿರುತ್ತವೆ.

ಜಿಲ್ಲಾಧಿಕಾರಿಗಳು, ಕಲಬುರಗಿ ಇವರು ಜಿಲ್ಲೆಯಲ್ಲಿ ನಷ್ಟಕ್ಕೊಳಗಾಗಿರುವ ದಾಲ್‌ಮಿಲ್‌ಗಳ ಪುನಃಶ್ಚೇತನಕ್ಕೆ ತಮ್ಮ ಪತ್ರ ಸಂಖ್ಯೆ: ಜಿಕೈಕೇ/ದಾಲ್‌ಮಿಲ್/ಸಂಕಷ್ಟ/2017-18 ದಿ:4/1/2018 ಮೂಲಕ ಕೆಲವು ಶಿಫಾರಸ್ಸುಗಳನ್ನು ಮಾಡಿರುತ್ತಾರೆ.

ಸರ್ಕಾರವು ದಾಲ್‌ಮಿಲ್‌ಗಳ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ 10 ಪರಿಹಾರ/ ರಿಯಾಯಿತಿಗಳ ಕುರಿತು ಪರಿಶೀಲಿಸಿರುತ್ತದೆ:

1. ಚೇತರಿಕೆ ರಜೆ (ರಿಕವರಿ ಹಾಲಿಡೆ)
2. ದಾಲ್‌ಮಿಲ್‌ಗಳನ್ನು ಆದ್ಯತಾ ವಲಯ ಎಂದು ಪರಿಗಣಿಸುವ ಬಗ್ಗೆ

3. ಎನ್.ಪಿ.ಎ ಯನ್ನು ಮರು ವ್ಯಾಖ್ಯಾನಿಸುವುದು
4. ಒ.ಟಿ.ಎಸ್ (ಒಂದು ಸಲ ಮರು ಪಾವತಿ)
5. ಪ್ರೋತ್ಸಾಹ ಧನ
6. ಎ.ಪಿ.ಎಂ.ಸಿ ಸೆಸ್ ವಿನಾಯಿತಿ
7. ವಿದ್ಯುತ್ ಬಿಲ್ ರಿಯಾಯಿತಿ
8. ವಿದ್ಯುತ್ ಎಲ್.ಟಿ ಮಿತಿಯನ್ನು ಹೆಚ್ಚಿಸುವ ಬಗ್ಗೆ
9. ಕನಿಷ್ಠ ಖರೀದಿ ಮಿತಿಯನ್ನು ಸಡಿಲಿಸುವುದು
10. ಬೇಳೆ ಆಮದಿಗೆ ನಿರ್ಬಂಧ ವಿಧಿಸುವುದು.

ಈ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಬ್ಯಾಂಕು/ಇಲಾಖೆಗಳನ್ನು ಕೋರಲಾಗಿದೆ.

1. ಬ್ಯಾಂಕ್‌ಗಳಿಗೆ ಸಂಬಂಧಿಸಿದ್ದು –4 ವಿಷಯಗಳು
2. ಕೃಷಿ ಮಾರಾಟ ಇಲಾಖೆ –1 ವಿಷಯ
3. ಜೆಸ್ಕಾಂ/ ಕೆ.ಆರ್.ಇ.ಸಿ –1 ವಿಷಯ
4. ನಫೆಡ್ –1 ವಿಷಯ
5. ಸರ್ಕಾರದ ಮಟ್ಟದಲ್ಲಿ –3 ವಿಷಯಗಳು

- ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿ ಸಭೆಯಲ್ಲಿ 4 ವಿಷಯಗಳ / ರಿಯಾಯಿತಿಗಳ ಬಗ್ಗೆ ಪರಿಹಾರ/ ರಿಯಾಯಿತಿಗಳನ್ನು ನೀಡುವ ಕುರಿತು ಚರ್ಚಿಸಿದ ತರುವಾಯ ದಾಲ್ ಮಿಲ್‌ಗಳ ಘಟಕಗಳ ಮಾಹಿತಿಯನ್ನು ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಗೆ ಸಲ್ಲಿಸಲಾಗಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎನ್.ಪಿ.ಎ ಆಗಿರುವ ದಾಲ್ ಮಿಲ್ ಗಳ ಪೈಕಿ ಅರ್ಹವಿರುವ 6 ಘಟಕಗಳಿಗೆ ಒ.ಟಿ.ಎಸ್ (One time settlement) ಸೌಲಭ್ಯ ಒದಗಿಸಿರುತ್ತದೆ.

- ಕಚ್ಚಾ ಬೇಳೆ ಕಾಳುಗಳ ಖರೀದಿ ಮಿತಿಯನ್ನು ಪ್ರಸ್ತುತ ಕನಿಷ್ಠ 1000 ಕ್ವಿಂಟಾಲ್‌ಗಳಿಗೆ ನಿಗಧಿಪಡಿಸಿರುವುದಾಗಿ ನಫೆಡ್ ಸಂಸ್ಥೆಯು ತಿಳಿಸಿರುತ್ತದೆ.
- ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಇರುವ ಇತರೆ ಸಮಸ್ಯೆಗಳು ಸಂಬಂಧಿಸಿದ ಇಲಾಖೆಗಳ ಪರಿಶೀಲನೆಯಲ್ಲಿರುತ್ತದೆ.
- ರೋಗಗ್ರಸ್ತ ದಾಲ್‌ಮಿಲ್‌ಗಳು ರೋಗಗ್ರಸ್ತ ಕೈಗಾರಿಕೆಗಳ ಪುನಃಶ್ಚೇತನ ನೀತಿಯಡಿಯಲ್ಲಿ ಅರ್ಜಿ ಸಲ್ಲಿಸಿದಲ್ಲಿ ಅವುಗಳಿಗೆ ನೀತಿಯ ಪ್ರಕಾರ ಪರಿಹಾರವನ್ನು ನೀಡಲಾಗುವುದು.

****